# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 21/2019

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | ಃ | ಶ್ರೀ ಶಶಿಧರ.ಪಿ | ಪ್ರಮಾಣ ಮಾಡಿಸಿದ ದಿನಾಂಕಃ | |
| **ತಂದೆ/ಗಂಡನ ಹೆಸರು** | ಃ | ಶ್ರೀ ಪ್ರಭುಸ್ವಾಮಿ | **23.09.2024** | |
| **ವಯಸ್ಸು** | ಃ | 48 ವರ್ಷ | | |
| **ವೃತ್ತಿ** | ಃ | ಡೆಪ್ಯೂಟಿ ರಿಜಿಸ್ಟ್ರಾರ್ ಕೋ ಆಪರೇಟಿವ್ ಸೊಸೈಟಿ | **ಪ್ರಾ.ಸಾ.** ಃ | 13 |
| **ವಾಸಸ್ಥಳ** | ಃ | ಬೆಂಗಳೂರು | **ಚಾ.ಸಾ.** ಃ | 24 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *03.03.2014* ರಿಂದ *03.08.2016* ರ ತನಕ ಮೈಸೂರು ಸಹಕಾರ ಸಂಘಗಳ ಕಛೇರಿಯಲ್ಲಿ ಉಪ ನಿಬಂಧಕನಾಗಿ ಕೆಲಸ ಮಾಡಿರುತ್ತೇನೆ. ಮಂಡಿ ಪೋಲೀಸ್ ಠಾಣೆಯಿಂದ ಮೊ.ಸಂಖ್ಯೆ *95/2015* ಪ್ರಕರಣದಲ್ಲಿ ದಿಃ*17.08.2015* ರಂದು ವೇದಾವತಿ ಯವರಿಗೆ ಲೇವಾದೇವಿ ವ್ಯವಹಾರದ ಲೈಸನ್ಸ್ ಇದೆಯಾ ಎಂದು ಮಾಹಿತಿ ಕೇಳಿದ್ದರು. ಆಗ ನಾನು ದಾಖಲೆಗಳನ್ನು ಪರಿಶೀಲಿಸಿ ಅವರಿಗೆ ಲೈಸನ್ಸ್ ಇಲ್ಲ ಎಂದು ವರದಿ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದಾಖಲೆಗಳು ತನಿಖಾಧಿಕಾರಿಯಿಂದ ಬಂದಿದ್ದ ಪತ್ರ ಮತ್ತು ನಾನು ಕೊಟ್ಟಿದ್ದ ವರದಿಯಿದ್ದು ಅದರಲ್ಲಿ ನನ್ನ ಸಹಿಗಳು ಇವೆ. ಸದರಿ ದಾಖಲೆಗಳನ್ನು ನಿ.ಪಿ-*19, 20* ಮತ್ತು ಸಹಿಯನ್ನು ನಿ.ಪಿ-*20*(ಎ) ಎಂದು ಗುರುತಿಸಿದೆ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ-**

*2.* ವೇದಾವತಿಯವರು ಯಾವ ವರ್ಷದಲ್ಲಿ ಲೈಸನ್ಸ್ ಪಡೆದಿಲ್ಲ ಎಂದು ನಮೂದಿಸಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಅವರು ಯಾವ ವರ್ಷವೂ ಲೈಸನ್ಸ್ ಪಡೆದಿಲ್ಲ. ಆ ಕುರಿತು ದಾಖಲೆ ಯಾಕೆ ಕೊಟ್ಟಿಲ್ಲ ಎಂದರೆ ಲೈಸನ್ಸ್ ಪಡೆದಿಲ್ಲವಾದ್ದರಿಂದ ಕೊಟ್ಟಿಲ್ಲ. ಒಂದು ಬಾರಿ ಲೈಸನ್ಸ್ ಪಡೆದರೆ ಲೈಸನ್ಸ್ ಅವದಿ ಮುಗಿದ ಬಳಿಕವೂ ದಂಡ ಪಾವತಿಸಿದಲ್ಲಿ ಲೈಸನ್ಸ್ ಅನ್ನು ಪುನಃ validate ಮಾಡಿ ಕೊಡುತ್ತೇವೆ ಎಂದರೆ ನಿಜ. ವೇದಾವತಿಯವರು ಲೇವಾದೇವಿ ವ್ಯವಹಾರ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಒಬ್ಬರು ಅಥವಾ ಇಬ್ಬರಿಗೆ ಸಾಲ ಕೊಟ್ಟಲ್ಲಿ ಲೈಸನ್ಸ್ ಪಡೆಯುವ ಅಗತ್ಯ ಇಲ್ಲ ಎಂದರೆ ಬಡ್ಡಿ ರಹಿತ ಸಾಲ ಇದ್ದಲ್ಲಿ ಅವಶ್ಯಕತೆ ಇಲ್ಲ. ಸ್ನೇಹಿತರಿಗೆ ಸಾಲ ಕೊಟ್ಟಲ್ಲಿ ಲೈಸನ್ಸ್ ಪಡೆಯುವ ಅಗತ್ಯ ಇಲ್ಲ ಎಂದರೆ ಬಡ್ಡಿ ಪಡೆಯುತ್ತಿದ್ದಲ್ಲಿ ಲೈಸನ್ಸ್ ಪಡೆಯುವುದು ಅವಶ್ಯಕ. ಆ ಬಗ್ಗೆ ಕಾಯ್ದೆ ಇದೆ. ಒಬ್ಬರು ಅಥವಾ ಇಬ್ಬರಿಗೆ ಸಾಲ ಕೊಟ್ಟಲ್ಲಿ ಸಹ ಬಡ್ಡಿ ಪಡೆಯುತ್ತಿದ್ದಲ್ಲಿ ಲೈಸನ್ಸ್ ಪಡೆಯುವ ಅವಶ್ಯಕತೆ ಇದೆ. ವೇದಾವತಿ ಎನ್ನುವವರು ಬಡ್ಡಿ ಪಡೆಯುತ್ತಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಲೈಸನ್ಸ್ ಪಡೆದು ವ್ಯವಹಾರ ಮಾಡುವ ಮಾಹಿತಿಯನ್ನು ತನಿಖಾಧಿಕಾರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*